ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕಕ್ಕೇರಾ ಗ್ರಾಮದವರಾದ ಪಿ. ನಂದಕುಮಾರ್ ದಲಿತ ಚಳವಳಿಯ ಕುರಿತು ವಿಶೇಷ ಆಸಕ್ತಿಯಿಂದ ಅಧ್ಯಯನ ನಡೆಸಿದ್ದಾರೆ. ಸಾಹಿತ್ಯ ವಿಮರ್ಶೆಯಲ್ಲೂ ಆಸಕ್ತರು.

ನೋಡಿ ನಗ್ತಿತ್ತಿದ್ರು. ನಿಮ್ಗೇನ್ ಗೊತ್ತು! ಸಾಲ್ಯಾಗ ನನ್ನ ಎಷ್ಟ್ ಅಸಯ್ಯ ಮಾಡ್ತಾರಂತ. ಅದ್ಕೇ ನಾ ಸಾಲಿ ಕಲಿಬೇಕಂದ್ರ ಬ್ಯಾರೆ ಊರ್ ಸಾಲಿಗಿ ಹಾಕ್ರಿ, ಇಲ್ಲೇ ನಮ್ಮೂರಾನ ಸಾಲಿಗಿ ಅಂದ್ರ ನಾ ಸಾಲಿನೇ ಒಲ್ಲ್ಯಾ' ಅಂತ್ಹೇಳಿ ಕೈಯಾನ ರೊಟ್ಟಿ ಬಿಸಾಕಿ ಹೋದ.

ಅದೇ ಹೊತ್ತಿನ್ಯಾಗ ಸಾಮವ್ವನ ಮಗ್ಳು ಭೀಮವ್ವ ಊರ್ ದ್ಯಾಮವ್ವ ಜಾತ್ರಿಗಂತ ತವರ ಮನಿಗಿ ಬಂದಳು. ಮಗ್ಳು ಬಂದ ಖುಷ್ಯಾಗ ಮನಿಗೆಲ್ಸ ಅಲಿದ್ ಅಲ್ಲೆ ಬಿಟ್ಟು, ಚರಿಗ್ಯಾಗ ನೀರ್ ತಂದ ಕೊಟ್ಟಳು. ಕೈಕಾಲ ತೊಳ್ದು ಒಳ್ಗ ಬರುತ್ಲೇ ಭೀಮವ್ವ 'ಯವ್ವ ಆಚಿ ಓಣಿ ಮಾದ್ರ ಜಗದ ಮಲ್ಲವಕ್ಕಿಲ್ಲ ಅವ್ರು ಮನ್ಯಾಗ ಏನಾಗ್ಯಾದ್ಬೆ, ಅಷ್ಟ್ ಮಂದಿ ಸೇರ್‍ಯಾರ ಆ ಮನಿ ಮುಂದ' ಅಂತ ಕೇಳಿದ್ಲು. ಅದ್ಕ ಸಾಮವ್ವ 'ಯವ್ವಾ.. ಹೊಸ್ತಲ್ಯಾನ ಕಾಲ್ ಇನ ಒಳ್ಗಿಲ್ಲ, ಕರ್ದ ಕೇಳಿದ್ರ ನಾ ಎಲ್ಲಿಂದ ಹೇಳ್ಲಿ' ಅಂದಳು. ಭೀಮವ್ವ ಬಂದಿದ್ನ್ಲೋಡಿ ಓಣ್ಯಾನ ತಂಗವ್ವ, ನಂದವ್ವ, ಸಾಬವ್ವ, ಹುಲಿಗೆವ್ವ, ದ್ಯಾಮವ್ವ ಬಂದು, 'ಭೀಮಿ ಹೆಂಗದಿಯೇ ಖೋಡಿ... ಗಂಡನ್ ಮನಿಗಿ ಹೋಗಿ ಕಲರ್ ಬಂದಾದ ನೋಡ್, ಏನಾರೇ ದೇವ್ರ ಒಳ್ಳೆದ್ ಮಾಡ್ಯಾನ' ಅಂತ್ಹೇಳಿ ದ್ಯಾಮವ್ವ ಮಾತ್ ಮುಗ್ಸಪ್ರಲ್ಲಿ ಹುಲಗವ್ವ 'ಏಯ್..! ಇಕಿನೆ ಆ ಜಗದ ಮಲ್ಲವ್ವನ ಮಗ್ಳು ನಿನ್ನ ವಾರ್‍ಗಿನೆ ಇರ್‍ಬೇಕು ಅಲಾsss' ಅದ್ಕ ಭೀಮವ್ವ, 'ಹೌದು! ನಾನು ಅಕಿ ವಾರ್‍ಗಿ ಬೆ.. ಬರಾಗ ನೋಡ್ದೆ ಅವ್ರ ಮನಿ ಮುಂದ ಬಾಳ್ ಮಂದಿ ಸೇರಿದ್ರು ಏನಾಗೈತ್ಬೇ ಸಣವ್ವಾ' ಅಂದಳು. 'ಯವ್ವ ಅದ್ನೆನ್ ಕೇಳ್ತಿ ಕತೀ... ಜಗದ ಮಲ್ಲವ್ವ ದೇವದಾಸಿ ಹೆಣ್ಮಗ್ಳು, ಶರಣಪ್ಪ ಸೌಕಾರ ಈಕಿನ ಇಟ್ಕೊಂಡಿದ್ದ. ಸೌಕಾರ್ನ ಮದ್ವಿ ಹೆಂಡ್ತಿ, ಸರವ್ವ ಸೌಕಾರ್‍ತಿಗಿ ಬಂಗಾರದ್ದಂಗ ಒಂದು ಹೆಣ್ಣು, ಇನಾ ಒಂದು ಗಂಡು ಅದಾವಾ... ಮಕ್ಳ ಬೆಳ್ದ ನಿಂತಾವ ನೀ ಮಾಡದ್ ಸರಿ ಕಾಣ್ಸಲ್ಲ. ಆ ಮಾದ್ರಗೇರಿ ಸಾವಾಸ ಬಿಡು ಅಂತ ಕಟ್ಕೊಂಡ ಹೆಂಡ್ತಿ ಕೂಡ ದಿನಾ ಜಗ್ಳ. ಅದ್ಕ ಬ್ಯಾಸ್ರಾಗಿ ಶರಣಪ್ಪ ಸೌಕಾರ ತನ್ನ ಐದ್ ಎಕ್ರೆ ಹೊಲ್ದಾಗ, ಮದ್ವಿ ಹೆಂಡ್ತಿಗಿ ಎರ್‍ಡ ಎಕ್ರೆ, ಜಗದ ಮಲ್ಲವ್ವಗ ಎರ್‍ಡ ಎಕ್ರೆ ಮಾಡ್ಯಾನ, ಒಂದ್ ಎಕ್ರೆ ಹೊಲ ಮಾರಿ ಇಬ್ರಿಗಿ ಚಂದ ಮನಿ ಕಟ್ಸಿ ಮಲ್ಲವ್ವನ ಮನ್ಯಾಗ ಇರ್‍ತಿದ್ದ. ಸೌಕಾರ ಮಾದ್ರಗೇರ್‍ಯಾಗ ಇದ್ರು ಮಡಿ ಮೈಲ್ಗಿ, ಪೂಜಿ-ಪುನಸ್ಕಾರ ಮಾಡೋದು ಬಿಟ್ಟರ್‍ಲಿಲ್ಲ. ರಾತ್ರಿ ಮಲ್ಗೊದ ಅಷ್ಟೇ ಮಲ್ಲವ್ವನ ಕೊಣ್ಯಾಗ, ತನ್ ಅಡ್ಗಿ ತಾನೇ ಮಾಡ್ಕೊಳವ, ತನ್ನರಿಬಿ ತಾನೇ ತೊಳ್ಕತ್ತಿದ್ದ. ಹಿಂಗ್ ಇಬ್ರೂ ಒಂದೇ ಮನ್ಯಾಗ ಸಂಸಾರ ಮಾಡ್ಕೊತಾ ಇದ್ರು' ಅಂದಳು ಹುಲಗವ್ವ. ಅದ್ಕ ಸಾಬವ್ವ. 'ಅಲ್ಲಾ! ಖೋಡಿ ಜಗದ ಮಲ್ಲವ್ವಗರ ಬುದ್ಧಿಬ್ಯಾಡ, ತನ್ನೆತ್ರಕ ಬೆಳ್ದ ನಿಂತ ಮಗ್ಳ ಮನ್ಯಾಗ್ಹಾಳ ಅನ್ನೊ ಕಬ್ರರ್‍ಲಿಲ್ಲ ಅಕಿಗಿ' ಅಂದ್ಲು.

ಈ ಮಾತಿಗಿ ಮಾತ್ ಸೇರ್‍ಸಿದ ನಂದವ್ವ 'ನ್ಯಾವ್ಯಾರರ ಕೇಳಿದ್ರ, ನಾನೇನೂ ದೇವದಾಸಿ ನನಗ ನಾನೇ ಆಗಿಲ್ಲವ್ವ, ಊರಾಗ ದೊಡ್ಡವ್ರ ಅಂತ ತಮಗ ತಾವೇ ಕರಕೊಂಡವರೇ ಈ ದಾರಿಗಿ ತಂದು ನಿಂದ್ರಿಸ್ಯಾರ ನನ್ನ. ಈ ಬಾಳ್ವೇ ನನ್ನ ತೆಲಿಗೆ ಮುಗೀಲಿ, ಮಗ್ಳರಾ ಚಂದ ಇರ್‍ಲಿ ಅಂತ ಇಷ್ಟೆಲ್ಲ ಅನಭವಿಸ್ಕೊಂಡು ಬದ್ಕಿನಿ. ಮತ್ ಮ್ಯಾಲಿ ಈ ಗಂಡುಳ್ಳ ಗರತ್ಯಾರ್ ಏನ್ ಸಾಚ್ಯಾ ಆರೇನ್ ಅಂತಾಳ.' ನಡಬರಕ ಬಾಯ್ಯಾಕಿದ ತಂಗವ್ವ 'ಅಕಿ ಮಾತು ಸರ್‍ಯಾದ ನಿನಾssssಆ ವಡ್ರ ಪಾರ ಶಿವ್ಯಾ ಇಲ್ಲ! ಸರವ್ವ ಸೌಕಾರ್‍ತಿ ಮನ್ಯಾಗ ಒಬ್ಬಕ್ಯಾ ಇದ್ದಾಗ ಯಾವಾಗ್ಬೇಕು ಅವಾಗ ಹೋಗಿ ಬರ್‍ತಾನಂತ. ಆದ್ರ ನಾವಂತು ಕಣ್ಣಾರೇ ಕಂಡಿಲ್ಲ! ಅದು ಸೌಕಾರ್‍ಗ ಗೊತ್ತಾಗಿ, ಅದ್ರ ಚಿಂತ್ಯಾಗ ಪಾರ್‍ಸಿ ಒಡ್ದು ಸತ್ತ ಅಂತಾರ, ಆದ್ರ ಏನಾಗ್ಯಾದೋ ಏನೋ... ಅದು ಮಾತ್ರ ದೇವ್ರಗ್ಗತ್ತಿದ ಮಾತು. ಆದ್ರ ಊರ್ ಮಂದಿ ಕೈಲೇ ಮಲ್ಲವ್ವ ನಾನಾ ಮಾತ್ ಅನ್ಸಗೊಂಡ್ಳು ಖೋಡಿ', 'ಅಲ್ಬೇ ಯಕ್ಕಾsss ಈಗ ಏನಗ್ಯಾದ ಅವ್ರ ಮನ್ಯಾಗ' ಅಂತ ಭೀಮವ್ವ ಕೇಳಪ್ಸರಲ್ಲಿ ಹೊರ್‍ಗಿಂದ 'ಲೇ...ತಿಪ್ಯಾ.. ಏಯ್.. ತಿಪ್ಯಾ' ಅಂತ ಗುಡಿಮ್ಯಾಲಿನ ನಿಂಗಪ್ಪ ಪೂಜಾರಿ ಎರಡು ಸಲ ಕರ್‍ದ, ಮನಿ ಒಳ್ಗಿದ್ದ